ಮಿಂಚುವಂಥ ಕೋಆರ್ಡ್ ಸೆಟ್‌ಗೆ ಸರಿಹೊಂದುವ ಜಾಕೆಟ್‌ಗಳು, ಅಗಲವಾದ ಪ್ಯಾಂಟ್‌ಗಳು ಎಲ್ಲರ ಕಣ್ಮನ ಸೆಳೆದವು. 1980ರಲ್ಲಿ ನಿಯಾನ್ ಬಣ್ಣಗಳಲ್ಲಿ ತಯಾರಾದ ಈ ಸೆಟ್ ಬೀಚ್ ಪ್ರವಾಸಕ್ಕೆ ಹೇಳಿ ಮಾಡಿಸಿದಂತಿತ್ತು. ಹೀಗೆ ಎಲ್ಲಾ ಕಡೆಗೂ ಸರಿಹೊಂದುತ್ತಿದ್ದ ಕೋಆರ್ಡ್ ಸೆಟ್ ಹೆಣ್ಣುಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸಿತ್ತು.

## ಸ್ಟೈಲ್ ಮಾಡುವುದು ಹೇಗೆ?

ಈ ರೀತಿ 1970–80ರಲ್ಲಿ ಮೋಡಿ ಮಾಡಿದ್ದ ಕೋಆರ್ಡ್ ಸೆಟ್ ಸ್ವಲ್ಪ ಸಮಯ ಮರೆಯಾಗಿತ್ತು. ಈಗ ಮುನ್ನೆಲೆಗೆ ಬಂದಿದ್ದು ಮಕ್ಕಳು, ಯುವತಿಯರು, ಆಫೀಸಿಗೆ ಹೋಗುವ ಮಾನಿನಿಯರು ಸೇರಿದಂತೆ ಎಲ್ಲಾ ವಯಸ್ಸಿನವರಿಗೂ ಸರಿಯಾಗಿ ಹೊಂದುತ್ತದೆ. ನೀವೇನಾದರೂ ಕಾಲೇಜಿಗೆ ಈ ಉಡುಗೆ ಧರಿಸುವುದಾದರೆ ಸಿಂಪಲ್ ಆಗಿ, ಅದಕ್ಕೆ ಸರಿ ಹೊಂದುವ ಆಭರಣಗಳನ್ನು ಹಾಕಿಕೊಳ್ಳಿ. ಉದಾಹರಣೆಗೆ ಕೆಂಪು ಬಣ್ಣದ ಕೋಆರ್ಡ್ ಸೆಟ್‌ಗೆ ಹೊನ್ನಿನ ಬಣ್ಣದ ಕೃತಕ ಆಭರಣಗಳು ಸರಿ ಹೊಂದುತ್ತವೆ. ಇದರ ಜೊತೆಗೆ ಲೆದರ್ ಸ್ಲೈಡ್ ಬ್ಯಾಗ್ ಮತ್ತು ಹೀಲ್ಸ್ ನಿಮ್ಮ ಲುಕ್ ಅನ್ನು ಇನ್ನಷ್ಟು ಅಂದಗೊಳಿಸುತ್ತದೆ.

ಆಫೀಸಿಗೆ ಬಳಸುವುದಾದರೆ ಆದಷ್ಟು ಪ್ಯಾಸ್ಟಲ್ (ತಿಳಿ) ಬಣ್ಣಗಳನ್ನು ಬಳಸಿ. ಉದಾಹರಣೆಗೆ ತಿಳಿ ಗುಲಾಬಿ, ತಿಳಿ ಹಸಿರು, ಕ್ರೀಮ್, ಸಿಲ್ವರ್ ಈ ಬಣ್ಣಗಳು ರಿಚ್ ಲುಕ್ ನೀಡುತ್ತವೆ. ಇದಕ್ಕೆ ಸರಳವಾದ ಮೇಕಪ್, ಹೈ ಪೋನಿ ಟೇಲ್, ದೊಡ್ಡ ಡಯಲ್ ವಾಚ್ ಹಾಗೂ ಶೂ ಬಳಸಿ. ಇದರೊಂದಿಗೆ ಕಾಂಟ್ರಾಸ್ಟ್ ಕಲರ್ ಬ್ಯಾಗ್‌ಗಳು ಅಚ್ಚುಕಟ್ಟಾಗಿ ಹೊಂದಿಕೆಯಾಗುತ್ತವೆ.

ಬೀಚ್ ಪ್ರವಾಸಕ್ಕಂತೂ ಇದು ಸೂಕ್ತವಾಗಿವೆ. ನಿಯಾನ್ ಕಲರ್ ಕೋಆರ್ಡ್ ಸೆಟ್‌ಗಳ ಜೊತೆಗೆ ಮುತ್ತಿನ ಆಭರಣ, ಜೂಟ್ ಬ್ಯಾಗ್‌ಗಳು ಸರಿಹೊಂದುತ್ತವೆ. ಬಿಸಿಲಿನ ಬೇಗೆ ತಪ್ಪಿಸಲು ಅಗಲವಾದ ಹ್ಯಾಟ್‌ಗಳು ಇತ್ತೀಚಿನ ಟ್ರೆಂಡ್. ಇದಕ್ಕೆ ಸರಿಯಾಗಿ ಬನ್ ಹೇರ್ ಸ್ಟೈಲ್ ಹಾಗೂ ಫ್ಲ್ಯಾಟ್ ಚಪ್ಪಲಿಗಳು 'ಫ್ಯಾಷನ್ ಐಕಾನ್' ರೀತಿ ಕಂಗೊಳಿಸುವಂತೆ ಮಾಡುತ್ತವೆ.

ದೇವಸ್ಥಾನ ಅಥವಾ ಪೂಜೆಗೆ ಹೋಗುವುದಾದರೆ, ಅದಕ್ಕೂ ತಕ್ಕಂತೆ ಕೋಆರ್ಡ್ ಸೆಟ್‌ಗಳು ಲಭ್ಯವಿವೆ. ಒಂದೇ ರೀತಿಯ ಪ್ರಿಂಟ್ ಇರುವ ಉದ್ದನೆಯ ಟಾಪ್ ಜೊತೆಗೆ, ಪಲಾಜೊ ಪ್ಯಾಂಟ್ ಇರುವ ಕೋಆರ್ಡ್ ಸೆಟ್ ಸರಳ ಹಾಗೂ ಸುಂದರ ಲುಕ್ ನೀಡುತ್ತದೆ. ಇದರೊಂದಿಗೆ ಚಿಕ್ಕ ಜುಮ್ಕಿ, ಬಳೆಗಳು, ಕೊಲ್ಲಾಪುರಿ ಚಪ್ಪಲಿ ಹೊಂದುತ್ತವೆ.

## ಮಕ್ಕಳಿಗೂ ಇದೆ...

ಮಕ್ಕಳಿಗೂ ಕೋಆರ್ಡ್ ಸೆಟ್‌ಗಳು ಲಭ್ಯ. ಟೀ ಶರ್ಟ್, ಶರ್ಟ್ ಜೊತೆ ಸ್ಕರ್ಟ್ ಮತ್ತು ಶಾರ್ಟ್ಸ್ ಮಕ್ಕಳಿಗೆ ಚೆನ್ನಾಗಿ ಕಾಣುತ್ತದೆ. ಹುಡುಗರಿಗೂ ಈ ಉಡುಪು ಚೆನ್ನಾಗಿ ಒಪ್ಪುತ್ತದೆ. ಬೇಸಿಗೆಗೆ ಹೇಳಿ ಮಾಡಿಸಿದ ಈ ಉಡುಗೆ ಆರಾಮದಾಯಕವಾಗಿರುತ್ತವೆ. ಎಲ್ಲಾ ಕಾರ್ಯಕ್ರಮಗಳಿಗೂ ಹೊಂದುವ ಇದು ಮಾರುಕಟ್ಟೆಯಲ್ಲಿ ಹೆಚ್ಚು ಸದ್ದು ಮಾಡುತ್ತಿವೆ. ಹೀಗೆ ಕ್ರೀಡೆಗಾಗಿ ತಯಾರಾಗಿದ್ದ ಕೋಆರ್ಡ್ ಸೆಟ್, ಪಾರ್ಟಿ, ಪ್ರವಾಸ, ಆಫೀಸ್, ಕಾಲೇಜು ಸೇರಿದಂತೆ ಎಲ್ಲಾ ಕಡೆ ಸದ್ದು ಮಾಡುತ್ತಿದೆ. ಕಡಿಮೆ ಖರ್ಚಿನಲ್ಲಿ ಒಳ್ಳೆಯ ಫ್ಯಾಷನ್ ಡ್ರೆಸ್ ಹುಡುಕುತ್ತಿದ್ದರೆ ಕೋಆರ್ಡ್ ಸೆಟ್ ಉತ್ತಮ ಆಯ್ಕೆ. ■



# ಚೆಕ್ಸ್ ಶರ್ಟ್



**ಚೆಕ್ಸ್** ಉಡುಗೆ ಅಥವಾ ಸೀಕ್ವೆನ್ಸ್ ಉಡುಪು ಯುವಪೀಳಿಗೆಯವರಿಗೆ ಇಷ್ಟವಾಗುವಂತಿದೆ. ಕಾಲ ಬದಲಾದಂತೆ ಮಕ್ಕಳ ಅಭಿರುಚಿಗಳೂ ಬದಲಾಗುತ್ತವೆ. ಹೊಸ ವಿನ್ಯಾಸದ ಉಡುಪು ಬಯಸುವವರಿಗೆ ಚೌಕುಳಿ ಉಡುಪು ಸರಿಹೊಂದುವಂತಿದೆ.

ಹಿಂದೆ ಈ ಚೆಕ್ಸ್ ಉಡುಗೆ ಬರೀ ಪುರುಷರಿಗೆ ಮಾತ್ರ ಸೀಮಿತವಾಗಿತ್ತು. ಇತ್ತೀಚಿನ ದಿನಗಳಲ್ಲಿ ಚೆಕ್ಸ್ ಡ್ರೆಸ್ ಮಹಿಳೆಯರ ವಾರ್ಡ್‌ರೋಬ್ ಕೂಡ ಅಲಂಕರಿಸಿಕೊಳ್ಳುತ್ತಿವೆ. ಮಹಿಳೆಯರು ಪುರುಷರು, ಮಕ್ಕಳು, ವೃದ್ಧರು ಎಂಬ ಭೇದಭಾವವಿಲ್ಲದೆ ಎಲ್ಲರಿಗೂ ಕ್ಲಾಸಿಕ್ ಲುಕ್ ನೀಡುವ ಈ ಚೌಕುಳಿ ಉಡುಪುಗಳಿಗೆ ಈಗ ಎಲ್ಲಿಲ್ಲದ ಬೇಡಿಕೆ.

ಚೌಕುಳಿ ಉಡುಪು ಧರಿಸಿದವರನ್ನು 'ಬೆಡ್‌ಶೀಟ್ ಅನ್ನು ಶರ್ಟ್ ಹೊಲಿಸಿದೆಯಾ' ಎಂದು ಛೇಡಿಸುತ್ತಿದ್ದ ಕಾಲವಿತ್ತು. ಈಗ ಅದೇ ಫ್ಯಾಷನ್ ಟ್ರೆಂಡ್ ಆಗಿದೆ. ಎಲ್ಲ ವಯೋಮಾನದ, ವಿವಿಧ ವ್ಯಕ್ತಿತ್ವ ಹೊಂದಿದ ಎಲ್ಲರಿಗೂ ಈ ಚೆಕ್ಸ್ ಉಡುಪು ಮ್ಯಾಚ್ ಆಗುವಂತಿದೆ. ಯಾವಾಗ ಬೇಕಾದರೂ 'ರೆಡಿ ಟು ವೇರ್' ಎನಿಸಿಕೊಳ್ಳುವ ಈ ಚೆಕ್ಸ್ ಉಡುಪು ಬೇಸಿಗೆ ಕಾಲಕ್ಕೆ ಸೂಕ್ತ ಹಾಗೂ ಆರಾಮದಾಯಕವೂ ಹೌದು.

## ಇತಿಹಾಸವೂ ಇದೆ...

ಚೆಕ್ಸ್ ಉಡುಗೆಯ ಬಳಕೆ ಬ್ರಿಟಿಷರ ಕಾಲದಿಂದಲೂ ಚಾಲ್ತಿಯಲ್ಲಿತ್ತು. ಆ ಕಾಲದಲ್ಲಿ ಅಧಿಕಾರಿ ವರ್ಗದವರು ಉದ್ದ ಗೆರೆ, ಚೌಕುಳಿಗಳುಳ್ಳ ಶರ್ಟ್‌ಗಳನ್ನು ಹೆಚ್ಚಾಗಿ ಧರಿಸುತ್ತಿದ್ದರು. ಕ್ಲಾಸಿಕ್ ಲುಕ್ ನೀಡುವ ಇದು ಅವರ ಘನತೆಯನ್ನೂ ಹೆಚ್ಚಿಸುತ್ತಿತ್ತು. ಬರೀ ಕಚೇರಿ ಮಟ್ಟದಲ್ಲಿ ಮಾತ್ರ ಧರಿಸಲಾಗುತ್ತಿದ್ದ ಈ ತರಹದ ಶರ್ಟ್‌ಗಳು ಕ್ರಮೇಣ ಎಲ್ಲಾ ವರ್ಗದ ಜನರನ್ನೂ ಆಕರ್ಷಿಸತೊಡಗಿದವು. ಬರೀ ಆಂಗ್ಲರೇ ಧರಿಸುತ್ತಿದ್ದ ಈ ಚೆಕ್ಸ್ ಉಡುಪುಗಳನ್ನು ಸೆಲೆಬ್ರಿಟಿಗಳು, ಮಾಡೆಲ್‌ಗಳು, ಚಿತ್ರತಾರೆಯರು ಧರಿಸಲಾರಂಭಿಸಿದರು. ಫ್ಯಾಷನ್‌ಪ್ರಿಯರಿಗೆ ಈ ಉಡುಪು ತಮ್ಮ ಪ್ರತಿಷ್ಠೆಯ ಪ್ರತೀಕವಾಗಿಯೂ ರೂಪುಗೊಂಡಿದ್ದು, ಸಾಮಾನ್ಯ ಜನರೂ ಈ ತರಹದ ವಿನ್ಯಾಸಗಳಿಗೆ ಮಾರು ಹೋಗಿದ್ದಾರೆ.

■ **ಉಷಾರಾಣಿ ಎಂ.ಎಸ್.**